ಮನವಿಗಳು

ಶ್ರೀ ಎಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ, ಜಯನಗರದಲ್ಲಿ ೨೦ ಗೋವುಗಳನ್ನು ಹತ್ಯೆ ಮಾಡಿ ಅಲ್ಲಿನ ರಸ್ತೆಯಲ್ಲಿ ಹಾಕಿದ್ದಾರೆ. ಬೆಂಗಳೂರು ನಗರದಲ್ಲಿಯೇ ಇಂತಹ ಒಂದು ಅನಾಹುತ ನಡೆದಿದೆ. ಗೋಹತ್ಯೆ ಮಾಡಬಾರದೆಂದು ಕಾನೂನಿದ್ದರೂ ಸಹ ನಮ್ಮ ದೇಶದಲ್ಲಿ ಪ್ರತಿನಿತ್ಯವೂ ಇದು ನಡೆಯುತ್ತಿದೆ. ಈ ಇಲಾಖೆ ಮೇಲೆ ನಾವು ಇಲ್ಲಿ ಚರ್ಚೆ ಮಾಡುತ್ತಿರುವಾಗಲೇ ಇಂತಹ ಒಂದು ಅನಾಹುತ ನಡೆದಿದೆ. ಸರ್ಕಾರ ಏನಾದರು ಇದರ ಬಗ್ಗೆ ಕ್ರಮ ತೆಗೆದುಕೊಂಡಿದೆಯೇ ಹೇಗೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್, ಇದು ನನ್ನ ಕ್ಷೇತ್ರದಲ್ಲಿ ನಡೆದಿರುವುದರಿಂದ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ.

MR. DEPUTY SPEAKER.—We have received it. We will pass it on to the Government. The Government should make a note of it and give a reply.

ಶ್ರೀ ಪಿ. ರಾಮದೇವ್,—ಇದು ಪ್ರತಿಯೊಬ್ಬರ ಮನಸ್ಸನ್ನು ಕಲಕಿರುವುದರಿಂದ ಮಾನ್ಯ ಮಂತ್ರಿಗಳು ಇವೊತ್ತೇ ಉತ್ತರ ಕೊಡಬೇಕೆಂದು ಹೇಳುತ್ತೇನೆ,

SRI Y. RAMAKRISHNA.—We will give tomorrow.

SRI P. RAMDEV.—I will create a law and order problem.

SRI Y. RAMAKRISHNA.—Tommorrow I will make it.

ಶ್ರೀ ಎಂ. ಚಂದ್ರಶೇಖರ್.—ಮಧ್ಯಾಹ್ನದ ಮೇಲೆ ಮಂತ್ರಿಗಳು ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ಹೇಳುತ್ತಾರೆ. ನಿಮಗೆ ಗೊತ್ತಾಗುವುದಿಲ್ಲ ಅಂದರೆ ಅರ್ಥ ಏನು ?

ಶ್ರೀ ಪಿ. ರಾಮದೇವ್.—ಪತ್ರಿಕೆಗಳಲ್ಲಿ ಸೀರಿಯಸ್ ವಿಚಾರ ಬಂದಾಗ ಮಂತ್ರಿಗಳು ತಿಳಿದು ಕೊಂಡು ಇರಬೇಕಾಗುತ್ತದೆ.

ಶ್ರೀ ಕೆ. ರಾಂಭಟ್.—ಸ್ಥಳೀಯ ಅಭ್ಯರ್ಥಿಗಳ ವಿಚಾರವಾಗಿ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೇನೆ. ನೂರಾರು ಜನ ಕೇಸು ಕಳೆದುಕೊಳ್ಳುತ್ತಾರೆ, ಸರ್ಕಾರದಿಂದ ಉತ್ತರ ತರಿಸಿಕೊಡಬೇಕು.

ಉಪಾಧ್ಯಕ್ಷರು.—ಪರಿಶೀಲನೆ ಮಾಡುತ್ತೇನೆ. ನಾಳೆ ತೆಗೆದುಕೊಳ್ಳೋಣ. Now, we will take up calling attention to a matter of urgent public importance.

CALLING ATTENTION TO A MATTER OF URGENT PUBLIC IMPORTANCE

Re :—Hardship caused due to fixation of Minimum Marks of 40% and 50% for admission of students to TTI's and NTTI's.

SRI T. CHOWDAIAH.—Sir. I call the attention of the Minister for Education about the hardship caused to the application for admission into the TTI's and NTTI's due to the fixation of minimum marks of 40% in the case of SCs/STs and 50% in the case of others.

MR. DEPUTY SPEAKER.—As the Hon. Minister for Education is not present, we will take up this subject after sometime.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸ್ವಾಮಿ ಕಾಲಿಂಗ್ ಅಟೆನ್‌ಷನ್ ಇದ್ದರೂ ತಮಗೆ ತಿಳಿಸದೇ ಗೈರುಹಾಜರಾದರೆ, ಈ ಸದನಕ್ಕೆ ಗೌರವ ಕೊಟ್ಟಂತಾಗುತ್ತದೆಯೆ ?

ಶ್ರೀ ಪಿ. ರಾಂದೇವ್.—ಭಾಸ್ಕರ ಶೆಟ್ಟರು ಸುತ್ತೋಲೆ ಕಳುಹಿಸಿರುವುದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಭಿ. ಭಾಸ್ಕರ ಶೆಟ್ಟಿ.—ಕೌನ್ಸಿಲ್ ನಡೆಯುತ್ತಿದೆ, ಅಲ್ಲಿಗೆ ಹೋಗಿದ್ದಾರೆ.

ಉಪಾಧ್ಯಕ್ಷರು.—ರಾಜ್ಯ ಸಚಿವೆಯರು ಹೇಳಿಕೆ ನೀಡುತ್ತಾರೆ.

SMT. NAGAMMA C. KESHAVAMURTHY.—On behalf of the Education Minister I wish to make the following Statement :

ಎಲ್ಲಾ ಶಿಕ್ಷಣಗಳಿಗೂ ಮೂಲ ಪ್ರಾಥಮಿಕ ಶಿಕ್ಷಣ ಆದ್ದರಿಂದ ಪ್ರಾಥಮಿಕ ಶಿಕ್ಷಕರ ಭೋಧನಾ ಮಟ್ಟ ಹೆಚ್ಚಿನದಾಗಿರಬೇಕು. ಶಿಕ್ಷಣ ಮಟ್ಟ ಉತ್ತಮಗೊಳಿಸಬೇಕೆಂಬ ಉದ್ದೇಶದಿಂದ ದಿನಾಂಕ ೧೩ನೇ ಮೇ ೧೯೮೨ ರ ಸರ್ಕಾರಿ ಆಜ್ಞೆ ಇಡಿ ೧೨೨ ಪಿ ಟಿ ಐ ೮೨ ರಲ್ಲಿ ಅಂಕಮಿತಿಯನ್ನು ಕೆಳಕಂಡಂತೆ ನಿಗದಿಪಡಿಸಲಾಯಿತು.—

ಹರಿಜನ/ಗಿರಿಜನ/ಅಂಗವಿಕಲರಿಗೆ	ಶೇ: ೪೦
ಇತರರಿಗೆ	ಶೇ : ೫೦

ಆದರೆ, ಉಪಾಧ್ಯಾಯ ಶಿಕ್ಷಣ ತರಬೇತಿ ಸಂಸ್ಥೆಗಳ ಬೇಡಿಕೆ ಮತ್ತು ಅಭ್ಯರ್ಥಿಗಳ ಅಭಾವ ದಿಂದಾಗಿ ಶಿಕ್ಷಣ ಇಲಾಖೆ ಆಯುಕ್ತರೊಡನೆ ಸಮಾಲೋಚಿಸಿ ಅಂಕಮಿತಿಯನ್ನು ಪುನರ್ವಿಮರ್ಶಿಸಿ ಕೆಳಕಂಡಂತೆ ಇಳಿಸಲಾಯಿತು.—

ಪರಿಜನ/ಗಿರಿಜನ/ಅಂಗವಿಕಲರಿಗೆ	ಶೇ : ೩೫
ಇತರರಿಗೆ	ಶೆ : ೪೫

ಈ ಆಜ್ಞೆಯನ್ನು ಆದೇಶ ಇ ಡಿ ೨೮ ಪಿ ಟಿ ಐ ೮೨ ದಿನಾಂಕ ೯-೭-೮೨ ರಲ್ಲಿ ಜಾರಿಗೆ ತರಲಾಯಿತು.

ಶ್ರೀ ಟಿ. ಪೌಡಯ್ಯ.—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವೆಯರು ಪುನಃ ಇದನ್ನು ಪರಿಶೀಲನೆ ಮಾಡಿ ೫-೫ ಮಾರ್ಕ್ಸ್ ಕಡಿಮೆ ಮಾಡಿದ್ದಾರೆ. ಈ ಬಗ್ಗೆ ಉಪಾಧ್ಯಾಯ ಶಿಕ್ಷಣ ತರಬೇತಿ ಸಂಸ್ಥೆಯ ಪರವಾಗಿ ನಾನು ಅವರಿಗೆ ಅಭಿನಂದಿಸುತ್ತೇನೆ. ಇದನ್ನು ನೋಡಿದರೆ ನನಗೇನೂ ಇದರಲ್ಲಿ ಡಿಸ್‌ಪ್ಯಾರಿಟಿ ಇದ್ದ ಹಾಗೆ ಕಾಣುತ್ತಾ ಇಲ್ಲ. ಇದರಿಂದ ಎಲ್ಲಾ ವರ್ಗದವರಿಗೂ ಅನುಕೂಲವಾಗುತ್ತದೆ. ಆದರೆ ಇನ್ನೂ ಸ್ವಲ್ಪಮಟ್ಟಿಗೆ ರಿಯಾಯಿತಿಯನ್ನು ಮಾಡಿದರೆ ಅನೇಕರಿಗೆ ಇನ್ನೂ ಅನುಕೂಲವಾಗುತ್ತದೆ. ದಯವಿಟ್ಟು ತಾವು ಇನ್ನೊಮ್ಮೆ ಪರಿಶೀಲನೆ ಮಾಡಿ ಇನ್ನೂ ಸ್ವಲ್ಪ ಮಟ್ಟಿಗೆ ರಿಯಾಯಿತಿಯನ್ನು ಮಾಡಿ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಸರ್ಕಾರ ಇದನ್ನು ಪುನರ್ವಿಮರ್ಶೆ ಮಾಡಿಯೇ ೫೦ ಇದ್ದಿದನ್ನು ೪೫ ಮಾಡಿದ್ದೇವೆ ೪೦ ಇದ್ದುದನ್ನು ೩೫ ಮಾಡಿದ್ದೇವೆ. ಇದನ್ನು ಮತ್ತೆ ಪುನರ್ವಿಮರ್ಶೆ ಮಾಡತಕ್ಕಂಥಾದ್ದು ಸರಿಯೂ ಇಲ್ಲ, ಅದರ ಬಗ್ಗೆ ಆಲೋಚನೆಯೂ ಇಲ್ಲ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಈಗ ಇದನ್ನು ಪುನರ್ವಿಮರ್ಶೆ ಮಾಡಿ ೪೦ ಮಾಡಿದ್ದೇನೆ ಅಂತ ಹೇಳುತ್ತೀರಿ. ಮೊದಲೂ ಇಷ್ಟೇ ಇತ್ತು, ಇದರ ಬಗ್ಗೆ ಹೊಸ ಆಜ್ಞೆ ಮಾಡಿದಂತೆ ನನಗೆ ಕಾಣಲಿಲ್ಲಾ. ಆದುದರಿಂದ ಮೊದಲಿದ್ದಂತೆಯೇ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ. ಸಿ. ಕೇಶವಮೂರ್ತಿ.—ಹಿಂದಿನ ವರ್ಷ ಈ ಬಗ್ಗೆ ಹೋದವರ್ಷ ಎಸ್‌ಎಸ್ ಎಲ್‌ಸಿ ರಿಸಲ್ಟ್ ಕಡಿಮೆ ಬಂದಿದ್ದರಿಂದ ವಿಶೇಷವಾದ ಪರಿಸ್ಥಿತಿ ಇತ್ತು. ಇದನ್ನು ಎಕ್ಸಾಮಿನ್ ಮಾಡಿ ಈಗ ಮಾಡಿದ್ದೇವೆ. ಈಗ ಎಸ್‌ಎಸ್‌ಎಲ್‌ಸಿ ರಿಸಲ್ಟ್ ಸ್ವಲ್ಪ ಉತ್ತಮವಾಗಿ ಕಂಡು ಬಂದಿರುವುದರಿಂದ ಇದನ್ನು ಪುನರ್ವಿಮರ್ಶೆ ಮಾಡಿದ್ದೇವೇ ವಿನಾ ಮತ್ತೆ ಪುನರ್ವಿಮರ್ಶೆ ಮಾಡುವುದಕ್ಕಾಗುವುದಿಲ್ಲ. ಇದನ್ನೂ ಇನ್ನೂ ಸುಧಾರಿಸಬೇಕೆನ್ನುವುದಾದರೆ ಉಪಾಧ್ಯಾಯರು ಮುತುವರ್ಜಿ ವಹಿಸಿ ಸುಧಾರಿಸ

ಬೇಕು ಹೇಗೆ ಎಂದರೆ ಒಳ್ಳೆಯ ವಿದ್ಯಾರ್ಥಿಗಳನ್ನು ತೆಗೆದುಕೊಂಡರೆ ಮಾತ್ರ ಸುಧಾರಿಸಬಹುದು. ಅವರು ಈ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನೂ ಅನೇಕ ಅನ್‌ಎಡೆಡ್ ಇನ್ಸ್‌ಟ್ಯೂಷನ್ಸ್ ಇವೆ. ಅದರಲ್ಲೂ ಮುಖ್ಯವಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಎರಡು ವಿಭಾಗಗಳನ್ನು ನಾವು ನೋಡಿಕೊಳ್ಳಬೇಕಾಗುತ್ತದೆ. ಒಂದನೆಯದು ಲಿಂಗ್ವಿಸ್ಟಿಕ್ ಮೈನಾರಿಟೀಸ್‌ನವರು ನಡೆಸತಕ್ಕಂಥಾ ಶಾಲೆಗಳು ಇನ್ನೊಂದು Institutitions run by other Managements. ಈ ಲಿಂಗ್ವಿಸ್ಟಿಕ್ ಮೈನಾರಿಟೀಸ್ ಇನ್ಸ್‌ಟ್ಯೂಷನ್ಸ್ ಏನು ಇವೆ, ಇದರಲ್ಲಿ ನಾವು ರಿಸರ್ವೇಷನ್ ಮಾಡುವುದಕ್ಕೆ ಸಾಧ್ಯವೇ, ಇದನ್ನು ಅದರಲ್ಲಿ ಜಾರಿಗೆ ತರುವುದಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ಹೇಳಬೇಕಾದರೆ it is a very complicated Problem and legal and constitutional aspects should be taken into consideration. ಇದನ್ನೆಲ್ಲಾ ನೋಡಿಕೊಂಡು ನಾವು ಎನ್‌ಫೋರ್ಸ್ ಮಾಡಬೇಕಾಗುತ್ತದೆ. ಇನ್ನು Institutions run by other Managements ಏನು ಇದೆ ಅದರ ಬಗ್ಗೆ ಏನು ಮಾಡುತ್ತಾರೋಗೊತ್ತಿಲ್ಲ ಈ ಪ್ರೈವೇಟ್ ಇನ್ಸ್‌ಟ್ಯೂಷನ್ಸ್‌ಗಳಿಗೆ ಈಗ ನಾವು ಯಾವ ರೀತಿಯಾದ ಗ್ರಾಂಟ್ ಸಹ ಕೊಡುತ್ತಾ ಇಲ್ಲ. ಈಗ ಅದು ಸರ್ಕಾರದ ಪರಿಶೀಲನೆಯಲ್ಲಿದೆ. All private institutions even industries ಮತ್ತು ಫ್ಯಾಕ್ಟರಿಯೂ ಸೇರಿರಬಹುದು, ಅಲ್ಲದೆ ಇನ್ನೂ ಬೇರೆ ಬೇರೆ ಯಾವುದೇ ಸಂಸ್ಥೆಗಳು ಎಜುಕೇಷನ್ ಇನ್ಸ್‌ಟ್ಯೂಷನ್ಸ್ ನಡೆಸುತ್ತಾ ಇರಬಹುದು, ಇವೆಲ್ಲಕ್ಕೂ ಕೂಡ ನಾವು ಯಾವರೀತಿಯಾಗಿ ಈ ರಿಸರ್ವೇಷನ್ ಅನ್ನು ಎನ್‌ಫೋರ್ಸ್ ಮಾಡಲಿಕ್ಕೆ ಸಾಧ್ಯವಾಗಬಹುದು ಎನ್ನುವ ಬಗ್ಗೆ ಪರಿಶೀಲನೆಯಲ್ಲಿದೆ. ಆದರಲ್ಲೂ ಮುಖ್ಯವಾಗಿ ಲಿಂಗ್ವಿಸ್ಟಿಕ್ ಮೈನಾರಿಟೀಸ್ ಇನ್ಸ್‌ಟ್ಯೂಷನ್ಸ್‌ನಲ್ಲಿ ಅವರು ತಮ್ಮ ಸೀಟುಗಳೆಲ್ಲಾ ಭರ್ತಿ ಮಾಡಿಕೊಂಡ ಮೇಲೆ ಬಾಕಿ ಉಳಿದಿದ್ದಕ್ಕೆ ಎಸ್‌ಸಿ, ಎಸ್‌ಟಿ, ಬ್ಯಾಕ್‌ವರ್ಡ್‌ಕ್ಲಾಸ್, ಬ್ಯಾಕ್‌ವರ್ಡ್ ಕಮ್ಯೂನಿಟೀಸ್‌ಗೆ ರಿಸರ್ವೇಷನ್ ಯಾವ ರೀತಿ ಮಾಡಬಹುದು ಅನ್ನುವುದೂ ಸಹ ಸರ್ಕಾರದ ಪರಿಶೀಲನೆಯಲ್ಲಿದೆ ಅನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಮಾನ್ಯ ಸದಸ್ಯರು ಹೇಳಿದಂತೆ ಸರ್ಕಾರೀ ಶಾಲೆಗಳಲ್ಲಿ ಆದರೆ ಅದಕ್ಕೆ ಏನೂ ನಿರ್ಬಂಧ ಮಾಡುವ ಹಾಗಿಲ್ಲ. ಅವರು ಸೇರಿಸಿಕೊಳ್ಳುತ್ತಾರೆ. ಆದರೆ ಈ ಏಡೆಡ್ ಸ್ಕೂಲ್ಸ್‌ಗಳು ಏನು ಇವೆ ಅದರಲ್ಲಿ ರಿಸರ್ವೇಷನ ಪರಿಪಾಲನೆ ಮಾಡಿಲ್ಲ. ತಾವು ಇದಕ್ಕೆ ಆಫಿಲಿಯೇಷನ್ ಹೇಗಾದರೂ ಕೊಡುತ್ತಿದ್ದೀರಿ. ಆದುದರಿಂದ ನಾನು ಹೇಳುವುದೇನೆಂದರೆ ಎಸ್, ಸಿ. ಮತ್ತು ಎಸ್.ಟಿ. ಬ್ಯಾಕ್‌ವರ್ಡ್ ಕಮ್ಯೂನಿಟೀಸ್, ಬ್ಯಾಕ್‌ವರ್ಡ್ ಟ್ರೈಬ್ ಜನಾಂಗದವರಿಗೆ ಈ ಏಡೆಡ್ ಇನ್ಸ್‌ಟ್ಯೂಷನ್ಸ್‌ನಲ್ಲಿ ರಿಸರ್ವೇಷನ್ ಇದೆ ಅನ್ನುವುದೇಗೊತ್ತಿಲ್ಲ. ಜನರಿಗೆ ಈ ಒಂದು ತಪ್ಪು ಕಲ್ಪನೆ ಬಂದಿರುವುದರಿಂದ ಇದನ್ನು ಹೋಗಲಾತಿಸಬೇಕಾದರೆ ಸರ್ಕಾರೀ ಸ್ಕೂಲ್ ಇನ್‌ಸ್ಪೆಕ್ಟರ್ಸ್ ಏನು ಇರುತ್ತಾರೋ ಆ ಶಾಲೆಗಳಿಗೆ ಹೋದಾಗ ಈ ಬಗ್ಗೆ ಎನ್‌ಫೋರ್ಸ್ ಮಾಡಬೇಕಾದ್ದು ಅವರ ಕರ್ತವ್ಯವಲ್ಲವೇ? ಈ ವಿಚಾರದಲ್ಲಿ ತಮ್ಮ ಕರ್ತವ್ಯವನ್ನು ಸರಿಯಾಗಿ ಪರಿಪಾಲನೆ ಮಾಡಬೇಡವೇ? ಹಾಗೆ ಪರಿಪಾಲನೆ ಮಾಡದೇ ಹೋದರೆ ಅಂಥಾವರ ಮೇಲೆ ತಾವೇನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ? ಅವರು ಈ ಬಗ್ಗೆ ಸರಿಯಾಗಿ ಪರಿಪಾಲನೆ ಮಾಡಿಲ್ಲಾ ಅನ್ನುವ ದೂರನ್ನು ಸಚಿವರ ಹತ್ತಿರವಾಗಲಿ ಅಥವಾ ಬೇರೆಯವರ ಹತ್ತಿರವಾಗಲಿ ಕೊಡುವುದಕ್ಕಾಗುವುದಿಲ್ಲ. ನಿಮ್ಮಲ್ಲಿ ಸರ್ಕಾರೀ ಸಿಬ್ಬಂದಿಯೇ ಇರುವಾಗ ಅದನ್ನು ಚೆಕ್ ಮಾಡಿ ಮಾನ್ಯ ಸಚಿವೆಯರಿಗೆ ತಿಳಿಸುವುದು ಅವರ ಕರ್ತವ್ಯವಲ್ಲವೇ? ಇನ್ನು ಲಿಂಗ್ವಿಸ್ಟಿಕ್ ಮೈನಾರಿಟೀಸ್ ವಿಚಾರದಲ್ಲಿ, ಕ್ರಿಶ್ಚಿಯನ್ಸ್ ಮುಸ್ಲಿಮ್ಸ್ ವಿಚಾರದಲ್ಲಿ ಹೇಳುವುದಾದರೆ ಆ ಶಾಲೆಗಳಲ್ಲಿ ಅವರಿಗೇ ಹೆಚ್ಚಾಗಿ ಕೊಡಿ ಬೇಡಅನ್ನುವುದಿಲ್ಲ ಆದರೆ ಅವರಿಗೆ ಕೊಟ್ಟು ಮಿಕ್ಕ ಸೀಟುಗಳು ಉಳಿದಿದ್ದರೆ ಅದನ್ನು ಯಾವರೀತಿ ಈ ಜನಾಂಗಕ್ಕೆ ರಿಸರ್ವೇಷನ್ ಕೊಡಬಹುದು ಅನ್ನುವುದನ್ನು ಪರಿಪಾಲನೆ ಮಾಡಬಹುದಲ್ಲಾ.

ಉಪಾಧ್ಯಕ್ಷರು.—ಅದನ್ನು ಎಕ್ಸಾಮಿನ್ ಮಾಡುತ್ತೇನೆಂದು ಹೇಳಿದರಲ್ಲಾ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅದನ್ನು ಎಕ್ಸಾಮಿನ್ ಮಾಡುವಾಗ ಕ್ರಿಶ್ಚಿಯನ್ಸ್‌ಗೆ, ಮುಸ್ಲಿಂಸ್‌ಗೆ ಎಷ್ಟೆಷ್ಟು ಸೀಟುಗಳು ಕೊಡಬೇಕೋ ಕೊಡಲಿ ಬೇಡ ಅನ್ನುವುದಿಲ್ಲ. ಆದರೆ ಅವರಿಗೆ ಕೊಟ್ಟು ಮಿಕ್ಕಂಥಾ ಸೀಟುಗಳನ್ನು ರಿಸರ್ವೇಷನ್ ಪ್ರಕಾರ ಕೊಡಬೇಕು. ಹಾಗೆಯೇ institutions run by the other managements ಅಲ್ಲೂ ಮಾಡಬೇಕು. ತಾವು ರೆಕಮೆಂಡ್ ಮಾಡಿದಂಥಾ

ಶಾಲೆಯನ್ನು ಅವರು ನಡೆಸುತ್ತಾ ಅವರು ಏನು ತಿಳಿದುಕೊಂಡಿದ್ದಾರೆ ಎಂದರೆ. ನಮಗೆ ರೆಕಮೆಂಡೇಷನ್ ಸಿಕ್ಕಿತಲ್ಲಾ ಆಷ್ಟೇ ಸಾಕು ಎಂದು ತಿಳಿದುಕೊಂಡಿದ್ದಾರೆ. ತಾವು ರೆಕೆಮೆಂಡ್ ಮಾಡದೇ ಹೋದರೆ ಅವರ ಶಾಲೆಯನ್ನು ನಡೆಸುವುದಕ್ಕಾಗುವುದಿಲ್ಲ. ಆದುದರಿಂದ ಈ ಎಲ್ಲಾ ಇನ್ಸ್ಟಿಟ್ಯೂಷನ್ಸ್‌ಗಳಲ್ಲೂ ಸಹ ಅವರಿವರಿಗೆ ಕೊಟ್ಟಾದ ಮೇಲೆ ಬಾಕಿ ಉಳಿದಿದ್ದಕ್ಕೆ ರಿಸರ್ವೇಷನ್ ಅನ್ನು ಪರಿಪಾಲನೆ ಮಾಡಬೇಕು ಅನ್ನುವುದನ್ನು ತಾವು ತಿಳಿಸುತ್ತೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ಏಡೆಡ್ ಸ್ಕೂಲ್ಸ್‌ಗೆ ತಾವು ಪರ್ಮಿಷನ್ ಕೊಡ ಬೇಕಾದರೆ ಈ ಒಂದು ಕ್ಲಾಸ್ ಅನ್ನು ಹಾಕಬೇಕು; ಎಂದು ಮಾನ್ಯ ಸದಸ್ಯರು ಈಗ ನನ್ನ ಗಮನಕ್ಕೆ ತಂದಿದ್ದಾರೆ. ಕೆಲವು ಶಾಲೆಗಳಲ್ಲಿ ಈ ರೀತಿಯಾಗಿ ಎನ್‌ಫೋರ್ಸ್ ಮಾಡಿಲ್ಲಾ ಆದರಿಂದ ಎಸ್ ಸಿ ಮತ್ತು ಎಸ್ ಟಿ, ಬ್ಯಾಕ್‌ವರ್ಡ್ ಕಮ್ಯೂನಿಟಿ ಮತ್ತು ಬ್ಯಾಕ್‌ವರ್ಡ್ ಕ್ಯಾಸ್ಟ್ ಈ ಜನಾಂಗಕ್ಕೆ ಸಿಕ್ಕಿಲ್ಲಾ ಅನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಸದಸ್ಯರು ಯಾವುದಾದರೂ ಒಂದು ನಿರ್ದಿಷ್ಟವಾದ ಪ್ರಕರಣತಂದರೆ ಇಂಥಾ ಶಾಲೆಯಲ್ಲಿ ಹೀಗಾಗಿದೆ ಅಂತ ಹೇಳಿದರೆ ಅದನ್ನು ಸರಿಪಡಿಸುವು ದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ತಾವು ಲಿಂಗ್ವಿಸ್ಟಿಕ್ ಮೈನಾರಿಟೀಸ್ ಬಗ್ಗೆ ಹೇಳಿದ್ದೀರಿ, ಆ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಅನ್ನುವ ಮಾತನ್ನು ಹೇಳಬಯಸುತ್ತೇನೆ.

SRI WILLIAM ST. JOHN SINCLAIR MORLEY.—Sir, on the point raised by the Hon. Minister with regard to linguistic minorities schools I would like to submit that I speak on behalf of the Anglo-Indian Schools and I can assure that we do not differentiate against anybody on the basis of caste, colour or creed or religion and we do not have any reservation. But, we do not differentiate on any ground whatsoever, any child and any citizen of India can apply to our schools and seats will be given on merit. Thank you.

ಶ್ರೀ ಬಿ.ವಿ. ಕಕ್ಕಿಲಾಯ —ಸ್ವಾಮಿ, ಖಾಸಗೀ ಇಂಗ್ಲಿಷ್ ಮಾಧ್ಯಮಿಕ ಶಾಲೆಯಲ್ಲಿ ಕನ್ನಡ ಮಾತ್ರ ಭಾಷೆಯಾಗಿರುವವರಿಗೆ ಮೀಸಲಾತಿ ಇಡಬೇಕು ಎನ್ನುವುದನ್ನು ಕಡ್ಡಾಯ ಮಾಡಿದ್ದೀರಾ? ಅಥವಾ ಇಂಗ್ಲಿಷ್ ಮಾಧ್ಯಮಿಕ ಶಾಲೆಗಳಲ್ಲಿ ಇವರಿಗೆ ಮೀಸಲಾತಿ ಇಲ್ಲ ಎನ್ನುವುದಾದರೆ ಸರ್ಕಾರವೇ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಆರಂಭ ಮಾಡುತ್ತೀರಾ? ಕನ್ನಡ ಮಾತೃಭಾಷೆಯಾಗಿ ಉಳ್ಳವರಿಗೆ ಈ ಸವಲತ್ತುಗಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಸಿಕ್ಕುವುದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಿದ್ದೀರಾ? ಈ ಬಗ್ಗೆ ನನಗೆ ವಿವರ ಬೇಕು?

ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ.—ಖಾಸಗೀ ಇಂಗ್ಲಿಷ್ ಮಾಧ್ಯಮ ಸ್ಕೂಲ್‌ಗಳು ಅನೇಕ ಇವೆ. ಇಲ್ಲಿ ಅವರಿಗೆ ಸಿಕ್ಕುತ್ತದೆ. ಅಲ್ಲದೆ ನಾವು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಗ್ರಾಂಟ್ ಕೊಡುತ್ತಾ ಇಲ್ಲ. ತಮಗೆ ಹೇಳಬೇಕಾದರೆ ೧೯೬೫ರ ಮುಂದೆ ಕೆಲವರು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಏನು ಶುರು ಮಾಡಿದರೋ ಆ ೨೭ ಶಾಲೆಗಳಿಗೆ ಮಾತ್ರ ಹಣ ಕೊಡುತ್ತಾ ಬಂದಿದ್ದೇವೆ, ಈಗಲೂ ಕೊಡುತ್ತಾ ಬಂದಿದ್ದೇವೆ. ಆ ೨೭ ಶಾಲೆಗಳು ಬಿಟ್ಟು ಮಿಕ್ಕ ಇಂಗ್ಲಿಷ್ ಮಾಧ್ಯಮಿಕ ಸ್ಕೂಲ್‌ಗಳಿಗೆ ನಾವು ಗ್ರಾಂಟ್ ಕೊಡುತ್ತಾ ಇಲ್ಲ. ಅಲ್ಲೆಲ್ಲಾ ಜನ್‌ಏಡೆಡ್ ಇನ್ಸ್ಟಿಟೂಷನ್ಸ್. ಅವಕ್ಕೆ ರಿಸರ್ವೇಷನ್ ಎನ್‌ಫೋರ್ಸ್ ಮಾಡುವ ವಿಷಯದಲ್ಲಿ ಸರ್ಕಾರ ಪರಿಶೀಲನೆ ಮಾಡುತ್ತಾ ಇದೆ. ಆ ಬಗ್ಗೆ ತೀವ್ರವಾಗಿ ಆಲೋಚನೆ ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಬಿ.ವಿ. ಕಕ್ಕಿಲಾಯ.—ಮೊದಲು ಇದ್ದ ಇಂಗ್ಲೀಷ್ ಶಾಲೆಗಳಿಗೆ ಏನು ಗ್ರಾಂಟ್ ಕೊಡುತ್ತಿದ್ದೀರೋ ಅವಕ್ಕಾದರೂ ರೀಸರ್ವೇಷನ್ ಬಗ್ಗೆ ವಿಚಾರಣೆ ಮಾಡುತ್ತೀರಾ?

ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ.—೧೯೬೫ರ ಮುಂಚೆ ೨೫ ಇಂಗ್ಲಿಷ್ ಮಾಧ್ಯಮ ಶಾಲೆ ಗಳನ್ನು ಏನು ಶುರು ಮಾಡಿದರು ಅದರ ಬಗ್ಗೆ ಈಗ ನನ್ನ ಹತ್ತಿರ ನೂಹಿತಿ ಇಲ್ಲ, ನಾನು ಆಮೇಲೆ ತಮಗೆ ತಿಳಿಸುತ್ತೇನೆ.